*ಪಿ. ಸುರೇಶ್, ಅರಸೀಕೆರೆ*

*ಜಟ್ಟಿ ಜಾರಿಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಂತಾನಲ್ಲ, ಏಕೆ?*



ಮೊದಲೇ ಬೋಳಿಸಿಕೊಂಡಿದ್ದನಂತೆ!

*ನೆ.ಸು. ಆನಂದ, ಕತ್ತರಿಗುಪ್ಪ*

*ಕಳಪೆ ಗುಣಮಟ್ಟದ ಆಹಾರ ತಿಂದು ಅನಾಥವಾಗಿ ಸಾಯುವ ಮೂಕಪ್ರಾಣಿಗಳಿಗೆ ಯಾರು ಹೊಣೆ?*

ಕಾರ್ಪೊರೇಷನ್ ವ್ಯಾನು!

*ವಿ. ಹೇಮಂತಕುಮಾರ್, ಬೆಂಗಳೂರು*

*ವೈಭೋಗಕ್ಕೂ, ವೈರಾಗ್ಯಕ್ಕೂ ಏನು ವ್ಯತ್ಯಾಸ?*

ಷೇರ್ ಮಾರ್ಕೆಟ್. ಮೇಲೆ ಹೋದರೆ ವೈಭೋಗ, ಕೆಳಗೆ ಬಿದ್ದರೆ ವೈರಾಗ್ಯ!

*ಸವಿರವಿ, ಬಾಳೆಹೊನ್ನೂರು*

*ಸಂಸಾರ ಸಾರಯುಕ್ತವಾಗಿರಲು ಏನು ಮಾಡಬೇಕು?*

ಸಾಲಮುಕ್ತವಾಗಿರಬೇಕು!

*ಎ.ಎಸ್. ಸ್ವಾಮಿ, ಶೋರಾಪೂರ*

ಮರಣದ ಭಯ ಇಲ್ಲದಿರುವವರು ಯಾರು?

ಕೋಮಾದಲ್ಲಿರುವವರು.

*ಮಲ್ಲಿಕಾರ್ಜುನ ಹ. ಬಗಲಿ*

*ಬೆಳ್ಳಂಬೆಳಗ್ಗೆ ಮನೆಗಳ ಮುಂದೆ ರಂಗವಲ್ಲಿ ಇಡುವ ಉದ್ದೇಶವೇನು?*



ರಾತ್ರೋರಾತ್ರಿ ಇಡಬಹುದಿತ್ತು; ಸೀರಿಯಲ್ ಮುಗಿಯುವುದೇ ಲೇಟಲ್ಲ!

*ಜೆ.ಸಿ. ವಾಸುಕಿ, ಶಿರಸಿ*

*ಪ್ರತ್ಯಕ್ಷ ದೇವರು ತಂದೆತಾಯಿಯಾದರೆ, ಪ್ರತ್ಯಕ್ಷ ಭೂತ ಯಾರು?*

ವರ್ತಮಾನ, ಭವಿಷ್ಯತ್ತನ್ನು ಹಾಳು ಮಾಡುವ ಯಾರಾದರೂ ಆಗಬಹುದು!

*ಜೆ.ಪ್ರದೀಪ್ ಕುಮಾರ, ಹೂವಿನ ಹಡಗಲಿ*

*ಸುಳ್ಳು ಹೇಳುವುದು ಸುಲಭವೋ ಅಥವಾ ಸತ್ಯ ಹೇಳುವುದು ಸುಲಭವೋ?*

ಇರಿ, ಇರಿ, ಭಗವದ್ಗೀತೆ ಇಟ್ಟುಕೊಂಡೋ, ಹಾಗೆಯೋ?

*ಕುಮಾರ ಚಲವಾದಿ, ಹೊಳೆನರಸಿಪುರ*

*ಕೆಟ್ಟು ಪಟ್ಟಣ ಸೇರು ಎನ್ನುತ್ತಾರೆ. ಮಠ ಸೇರದರೆ ಹೇಗೆ ಸಾರ್?*

ಗುಡ್. ಅಲ್ಲಿ ಸೇರಿದನಂತರ ಮಜಬೂತಾಗಿ, ರಾಜಾರೋಷವಾಗಿ ಕೆಡಬಹುದು!

*ಆದಿನಾರಾಯಣಮುನಿ, ಬೆಂಗಳೂರು*

*ಆರ್ಥಿಕ ಶ್ರೀಮಂತಿಕೆ, ಜ್ಞಾನ ಶ್ರೀಮಂತಿಕೆ ಹಾಗೂ ಹೃದಯ ಶ್ರೀಮಂತಿಕೆಗಳಲ್ಲಿ ಯಾವುದು ಶ್ರೇಷ್ಠ?*

ಆದಿಯಲ್ಲಿ ಹೃದಯ ಶ್ರೀಮಂತಿಕೆ, ನಾರಾಯಣನಂತಿರಲು ಆರ್ಥಿಕ ಶ್ರೀಮಂತಿಕೆ, ಮುನಿಯಂತಿರಲು ಜ್ಞಾನ ಶ್ರೀಮಂತಿಕೆ!

*ಎಂ.ಆರ್. ಪವನ್ ಕುಮಾರ್, ಬಳ್ಳಾರಿ*

*ಕಾಣದ ದೇವರ ಧ್ಯಾನಕ್ಕೂ, ಕಾಣುವ ಹುಡುಗಿಯರ ಧ್ಯಾನಕ್ಕೂ ಏನು ವ್ಯತ್ಯಾಸ?*

ಅಲ್ಲಿ ಭಕ್ತಿಗೀತೆಗಳು, ಇಲ್ಲಿ ವಿರಹಗೀತೆಗಳು

*ಶ್ರೀಮತಿ ಎಸ್.ವಿ. ಕಾಶಿನಕುಂಟೆ, ಬಾಗಲಕೋಟೆ*

*ಅನಕ್ಷರಸ್ಥ ಪೂಜಾರಿಗೆ ಅಕ್ಷರದೇಗುಲ ಒಪ್ಪಿಸುವುದು ಸರಿಯೇ?*

ಯಡ್ಡಿಗೆ ಮು.ಮಂ, ಗೌಡರಿಗೆ ಪ್ರ.ಮಂ. ಪಟ್ಟ ಕೊಟ್ಟಿರುವಾಗ......!

*ಎಂ.ಎಸ್. ಧರ್ಮೇಂದ್ರ,*

*ಹಿಂದಿನ ಗಾಂಧರ್ವ ವಿವಾಹಕ್ಕೂ, ಇಂದಿನ ಬಾಲಿವುಡ್ ನಟರ ವಿವಾಹಕ್ಕೂ ಸಂಬಂಧವೇನು?*

ಗಾಂಧರ್ವ ವಿವಾಹದ ವಿಚ್ಛೇದನಕ್ಕೆ ಲಾಯರ್‌ನ ಅಗತ್ಯವಿರಲಿಲ್ಲ!

*ಗೀತಾ ಬರ್ಲ, ಅಮ್ಮೈ*

*ಉತ್ತಮ ಕೆಲಸಗಳನ್ನು ಮಾಡುವವರಿಗೆ ಜನಮೆಚ್ಚುಗೆಗಿಂತ ದೊಡ್ಡ ಪ್ರಶಸ್ತಿ ಬೇರೆ ಯಾವುದಿದೆ?*

ಆತ್ಮತೃಪ್ತಿ.

*ಶ್ವೇತಾಲಕ್ಷ್ಮಿ ಅಮ್ಮೈ, ಬೆಂಗಳೂರು*

*ಈ ಪ್ರಪಂಚದಲ್ಲಿ ಅತ್ಯಂತ ಜಾಣರು ಯಾರು?*

ಅತ್ಯಂತ ದಡ್ಡರಂತೆ ವರ್ತಿಸುವವರು.

*ಸೋಮಶೇಖರ್, ಎಲೆಮುದ್ದನಹಳ್ಳಿ*

*ವಿಶ್ವಕ್ಕೆ ಭಾರತದ ಕೊಡುಗೆ ಏನು?*

ಗೂಳಿಹಟ್ಟಿಯಂತಹ ಪ್ರಾಣಿಗಳು!

## ಬಹುಮಾನಿತ ಪ್ರಶ್ನೆ

*ಹಾಡ್ಯ ಜಯಾನಂದ, ಮೈಸೂರು*

*ಸುಲಗ್ನಾ ಸಾವಧಾನ ಎನ್ನುತ್ತಾರಲ್ಲಾ, ಹಾಗೆಂದರೇನು?*

ಸಾವಧಾನ್ ಎಂದರೆ ಎಚ್ಚರ! ಎಂದು. ವಿವಾಹವಾದೀರಿ, ಎಚ್ಚರ ಎಂಬ ಎಚ್ಚರಿಕೆಯ ನುಡಿ ಅದು!

*ರಮೇಶ್, ಹನುಮನಾಳು*

*ಸಿನಿಮಾರಂಗ ಸ್ವರ್ಗವಂತೆ ಮಿ॥ ರಾಮ್. ಹಾಗಾದರೆ ನಾಟಕರಂಗ?*

ಸ್ವರ್ಗದ ಮೆಟ್ಟಿಲು!

*ನೆ.ಲ. ರಾಮಮೂರ್ತಿ, ಬೆಂಗಳೂರು*

*ಕಡು ಕಷ್ಟದಿ ಕಳೆದರೆ ಬಾಲ್ಯದ ಜೀವನ. ವ್ಯಕ್ತಿ ಆಗುವನೆ ಪರಿಪೂರ್ಣ?*

ಹಾಗಿದ್ದರೆ ರಿಟೈರಾದ ಎಲ್ಲಾ ಕತ್ತೆಗಳೂ ಪರಿಪೂರ್ಣವಾಗಬೇಕಿತ್ತು!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*

*ಅಲ್ರಪ್ಪೋ ಈ ನೆರೆಹೊರೆಯವರು ಎಂದರೆ ಯಾರು?*



ನೆರೆ ಪರಿಹಾರದಲ್ಲಿ ಹೊರೆ ಹೊರೆಗಳನ್ನು ನುಂಗಿದವರು.

*ಮೊಳಕಾಲ್ಮೂರು ಸುರೇಶ್, ಬಳ್ಳಾರಿ*

*ಸಂಸಾರವೆಂಬ ಬಂಡಿಗೆ ಗಂಡ-ಹೆಂಡತಿ ಎರಡು ಚಕ್ರಗಳಂತೆ; ಒಂದು ಚಕ್ರ ಮುರಿದರೆ?*

ವಕ್ರವಾಗಿ ಓಡುತ್ತದೆ.

*ಶ್ರೀನಾಥ್ ಎನ್.ಎ. ಬೆಂಗಳೂರು*

*ಇಲ್ಲೊಬ್ಬಳು ನನ್ನ ಕಂಡೊಡನೆ 'ಸೀನುತ್ತಾಳಲ್ಲಾ' ಏನು ಸ್ವಾಮಿ ಇದರ ಗುಟ್ಟು?*

ಅದು ಒಂಟಿ ಸೀನೇ ಇರಬೇಕು!

■ ರಾಮ್